OS. No.87/2016
PW-3

**<u>ಸಾಕ್ಷಿಗೆ ದಿನಾಂಕ 19-11-2022 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ SPS ವಕೀಲರಿಂದ</u>**

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬಿಜನಳ್ಳಿ ಪ್ರಾರ್ಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಕಳೆದ 8 ವರ್ಷಗಳಿಂದ ಬಿಜನಳ್ಳಿ ಗ್ರಾಮದ ಶಾಲೆಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಶಿಕ್ಷಕ ವೃತ್ತಿ ಸೇರುವುದಕ್ಕಿಂತ ಮುಂಚೆ ವ್ಯವಸಾಯ ಮಾಡುತ್ತಿದ್ದೆನು. ಹಾಜಪ್ಪ ಈತನು ಈಗ ತೆಗನೂರು ಗ್ರಾಮದಲ್ಲಿ ವಾಸವಾಗಿರುತ್ತಾನೆ. ಹಾಜಪ್ಪನು ತೆಗನೂರು ಗ್ರಾಮದಲ್ಲಿ ಮನೆ ಹೊಂದಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂಬರ 30 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂ.30 ಇನಾಮತಿ ಜಮೀನು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ 3-4 ಬಾರಿ ಬಂದಿರುತ್ತೇನೆ ಎಂದರೆ ಸರಿ. ಸರ್ವೇ ನಂ.30 ರಲ್ಲಿ ಪ್ರತಿವಾದಿಗೆ 2 ಎಕರೆ 33 ಗುಂಟೆ ಜಮೀನು ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂ.30 ರ ಪೈಕಿ ಪಟ್ಟ 2 ಮತ್ತು 7 ರಲ್ಲಿ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ.

ವಾದಿಗೆ ಎಷ್ಟು ಎಕರೆ ಜಮೀನು ಮಂಜೂರಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ, ಸಾಕ್ಷಿಯು ಮುಂದುವರೆದು 2 ಎಕರೆ 09 ಗುಂಟೆ ಜಮೀನು ಮಂಜೂರಾಗಿರಬಹುದು ಎಂದು ನುಡಿಯುತ್ತಾರೆ. ಸರ್ವೇ ನಂ.30 ರಲ್ಲಿ ನಮಗೂ ಸಹ ಜಮೀನು ಮಂಜೂರಾಗಿರುತ್ತದೆ. ಸರ್ವೇ ನಂ.30 ರಲ್ಲಿ ನನ್ನ ಪಾಲಿಗೆ 22 ಗುಂಟೆ ಜಮೀನು ಬಂದಿರುತ್ತದೆ. ವಾದಿಯು ತನ್ನ ಆಸ್ತಿಯನ್ನು ಇನ್ನೊಬ್ಬರಿಗೆ ಮಾರಾಟ ಮಾಡಿರುತ್ತಾಳೆ. ಸದರಿ ಆಸ್ತಿಯನ್ನು ವಾದಿಯು ಗುರುಸಿದ್ಧಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾಳೆ. ಸದರಿ ಆಸ್ತಿಯ ಕೆಲವು ಭಾಗವನ್ನು ಡಾಃ ಕಾಂತ ರವರಿಗೂ ಸಹ ಮಾರಾಟ ಮಾಡಿರುತ್ತೇನೆ. ವಾದಿಯು ತನ್ನ ಜಮೀನನ್ನು ಮಾರಾಟ ಮಾಡಿರುವುದರಿಂದ ಆಕೆಯ ಬಳಿ ಯಾವುದೆ ಜಮೀನು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯ ಬಳಿ 36 ಗುಂಟೆ ಜಮೀನು ಇದೆ ಎಂದು ನುಡಿಯುತ್ತಾರೆ.

ಸರ್ವೇ ನಂ.30 ರಲ್ಲಿ ನಾನು ಕೆಲವೊಂದು ಜಾಗವನ್ನು ಅತೀಕ್ರಮಣ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ದಾಖಲಾತಿಗಳನ್ನು ಆಕೆಯ ಗಂಡನ ಹೆಸರಿನಲ್ಲಿ ಇದ್ದುದನ್ನು ಮಾತ್ರ ನೋಡಿರುತ್ತೇನೆ. ದಾವಾ ಆಸ್ತಿ 2 ಎಕರೆ 09 ಗುಂಟೆ ವಾದಿಯ ಗಂಡನ ಜೀವಿತಾವಧಿಯಲ್ಲಿ ಮಾರಾಟ

ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಯಾವುದೆ ಸಾಗುವಳಿ ಇಲ್ಲ ಎಂದರೆ ಸರಿ. ಪ್ರತಿವಾದಿಗೆ ದಾವಾ ಆಸ್ತಿಯ ಸ್ವಾಧೀನವನ್ನು ಹೊಂದಿರುತ್ತಾನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೆ ಮಾಹಿತಿ ಇಲ್ಲದೆ ಇದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.